<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ**. 110/2020**</u>

ಚಾಸಾ-9 ಫ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08-04-2026

| | | |
|---|---|---|
| ಹೆಸರು | : | ಸಿದ್ದು |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಕರಜಗಿ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

ಚಾಸಾ 1, 6 ರಿಂದ 8 ರವರು ಪರಿಚಯ ಇಲ್ಲ. ಮೃತ ಬಸವರಾಜ ಪರಿಚಯ ಇಲ್ಲ.

ನನಗೆ ಈ ಪ್ರಕರಣ ಕುರಿತು ಮಾಹಿತಿ ಇಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಪೋಲಿಸರ ಕೋರಿಕೆ ಮೇಲೆ ನಾನು ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 31-05-2019 ರಂದು ಸಾಯಂಕಾಲ 4-30 ಕ್ಕೆ ನಾನು ಹೈದ್ರಾ ಕ್ರಾಸ ಬಳಿ ಇದ್ದೆ ಎಂದರೆ ಸರಿ. ಆಗ ಮೃತ ತನ್ನ ಮೋಟರ ಸೈಕಲ ಮೇಲೆ ಮಣೂರು ದೇವಸ್ಥಾನದಿಂದ ಹಿಂದುರುಗಿ ಬಡದಾಳ ಗ್ರಾಮಕ್ಕೆ ಹೋಗುತ್ತಿರುವಾಗ ಹೈದ್ರಾ ಕ್ರಾಸ ಹತ್ತಿರ ಪೆಟ್ರೋಲ ಬಂಕ ಬಳಿ ಒಬ್ಬ ಟಂಟಂ ಚಾಲಕನು ಅತೀವೇಗದಿಂದ ಬಂದು ಮೃತ ಬಸವರಾಜ ನಡೆಸುತ್ತಿದ್ದ ಮೋಟರಸೈಕಲಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಬಸವರಾಜನ ತಲೆಗೆ ಗಂಭೀರ ಗಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರಕ್ತಸ್ರಾವ ಆಗಿ ತೀರಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಚಾಸಾ 7, 8 ರವರು ಸ್ಥಳದಲ್ಲಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತ ಟಂಟಂ ಚಾಲಕನ ತಪ್ಪಿನಿಂದ ಅಗಿರುತ್ತದೆ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನೋಡಿದರೂ ಸಹ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನಿಪಿ-**15** ಮತ್ತು **16** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **MSD** ವಕೀಲರಿಂದಃ-</u>

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ